**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 54/2022**

**ಸಾಕ್ಷಿಗೆ ದಿನಾಂಕ 08.12.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಾಮೇಗೌಡ | ಪಿ.ಡಬ್ಲ್ಯೂ-9 |
| ತಂದೆಯ/ಗಂಡನ ಹೆಸರು | : | ತಿಮ್ಮೆಗೌಡ | ಸಿ.ಡಬ್ಲ್ಯೂ- 26 |
| ವಯಸ್ಸು | : | 56 | |
| ಉದ್ಯೋಗ | : | ಎ ಎಸ್ ಐ ಬಿಳಿಕೆರೆ ಪೋಲೀಸ್ ಠಾಣೆ | |
| ವಾಸಸ್ಥಳ | : | ಹುಣಸೂರು | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ದಿನಾಂಕ 2017 ನವೆಂಬರ್ ರಿಂದ 2023 ಜೂನ್ ರ ವರೆಗೆ ಹೆಚ್ ಡಿ ಕೋಟೆ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 30.11.2021 ರಂದು ನಾನು ಠಾಣಾ ಉಸ್ತುವಾರಿಯಲ್ಲಿದ್ದಾಗ ಬೆಳಿಗೆ 9.30 ಗಂಟೆಗೆ ಸರಗೂರು ಪಟ್ಟಣದ ವಾಸಿ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ನೀಡಲಾಗಿ ಸ್ವೀಕರಿಸಿಕೊಂಡು ಠಾಣಾ ಮೊಕದ್ದಮೆ ನಂಬರ್ 368/2021 ರಂತೆ ಕಲಂ 304 ಎ ಐಪಿಸಿ ರೆ/ವಿ ಸೆ.187 ರ ಐ ಎಂ ವಿ ಆಕ್ಟ್ ರಂತೆ ಪ್ರಕರಣವನ್ನು ದಾಖಲಸಿಕೊಂಡಿರುತ್ತೇನೆ. ಪ್ರಕರಣವನುನ ಮುಂದಿನ ತನಿಖೆಗಾಗಿ ವರ್ಗಾಯಿಸಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದರಲ್ಲಿದ್ದ

ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲಾತಿಯು ದೂರು ಅದು ಈಗಾಗಲೇ ನಿಪಿ ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ ಎಂದು ಸಾಕ್ಷಿಯ ಸಹಿಯನ್ನು 1(ಬಿ) ಎಂದು , ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು ಅದು ನಿಪಿ 18 ಎಂದು ಸಾಕ್ಷಿಯ ಸಹಿಯನ್ನು ನಿಪಿ 18(ಎ) ಎಂದು ಗುರುತಿಸಲಾಯಿತು. ಸದರಿ ಪ್ರಕರಣವು ಘೋರ ಪ್ರಕರಣವಾದ್ದರಿಂದ ಮುಂದಿನ ತನಿಖೆಗಾಗಿ ಚಾಸಾ 27 ರವರಗೆ ವರ್ಗಾ ಯಿಸಲಾಯಿತು.

**<u>ಪಾಟೀ ಸವಾಲು ಆರೋಪಿ ಪರ ಎಸ್ ಡಿ ವಕೀಲರಿಂದಃ</u>**

ಚಾಸಾ 1 ರವರ ಪರಿಚಯ ನನಗೆ ಇರುವುದಿಲ್ಲ. ಬೆಳಿಗ್ಗೆ 6.30 ಗಂಟೆ ಸಮಯದಲ್ಲಿ ಈ ಪ್ರಕಣಕ್ಕೆ ಸಂಬಂದಿಸಿದಂತೆ ಯಾವುದೆ ದೂರನ್ನು ಸ್ವೀಕರಿಸಿರುವುದಿಲ್ಲ. ಅಪಘಾತದಲ್ಲಿ ಬಾಗಿಯಾದ ವಾಹನವು ಆರೋಪಿ 1 ರವರಿಗೆ ಸೇರಿರುವುದಿಲ್ಲ ಎಂದರೆ ಸಾಕ್ಷಿಯು ಕಲಂ 187 ರ ಐ ಎಂ ವಿ ಅಡಿಯಲ್ಲಿ ಚಾರ್ಜ್ ಶೀಟನ್ನು ಹಾಕಲಾಗಿರುತ್ತದೆ ಎಂದು ನುಡಿಯುತ್ತಾರೆ. ಅಪಘಾತವನ್ನು 1 ನೇ ಆರೋಪಿಯವರೇ ಮಾಡಿರುತ್ತಾರೆ ಎಂದು ನನಗೆ ಖುದ್ದಾಗಿ ತಿಳಿದಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಪಿರ್ಯಾದುದಾರರು ಮಾಹಿತಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಅಪಘಾತ ಆಗಿಲ್ಲದೆ ಇದ್ದರು ಪಿರ್ಯಾದಾರುರಿಗೆ ಅನುಕೂಲವಾಗುಂತೆ ಸುಳ್ಳು ಪ್ರಕಣವನ್ನು ದಾಖಲಾಸಲಾಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ